ಸಂಪಾದಕೀಯ

# ಮಹಾನ್‌ಚೇತನಕ್ಕೆ ಭಕ್ತಿಪೂರ್ಣ ನಮನ

**ಸ್ವಾಮಿ** ವಿವೇಕಾನಂದರ ವಿದ್ಯುತ್‌ಸ್ಪರ್ಶ ದಂತಿದ್ದ ಧೀರಗಂಭೀರ ವಾಣಿ ಸ್ಫೂರ್ತಿಯ ಚಿಲುಮೆಯಾಗಿ ಮನುಕುಲದ ಅಮೂಲ್ಯ ಆಸ್ತಿಯಾಗಿದೆ. ಆದರೆ ಅವುಗಳಿಂದ ಪಡೆದ ಸ್ಫೂರ್ತಿಯನ್ನು ನಿರಂತರ ಕಾಯ್ದುಕೊಂಡು ಬಾಳನ್ನು ರೂಪಿಸಿಕೊಂಡಾಗ ವ್ಯಕ್ತಿ ಎಷ್ಟು ಎತ್ತರಕ್ಕೇರಬಹುದು ಎಂಬುದಕ್ಕೆ ಒಂದು ಜೀವಂತ ನಿದರ್ಶನವಾಗಿದ್ದರು ಇತ್ತೀಚೆಗೆ ನಮ್ಮಿಂದ ಕಣ್ಮರೆಯಾದ ಪರಮ ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು. Man was created in the divine image – **ಭಗವಂತನ ದಿವ್ಯ ಪ್ರತಿಕೃತಿ ಮಾನವ** ಎಂಬುದು ದೇವತಾಶಾಸ್ತ್ರದ ಒಂದು ಪ್ರಸಿದ್ಧ ಸಿದ್ಧಾಂತ. ಇದನ್ನು ಅನ್ವಯಿಸಿ Swami Ranganathanandaji was created in the image of Swami Vivekananda—ಸ್ವಾಮಿ ರಂಗನಾಥಾನಂದಜಿಯವರು ಸ್ವಾಮಿ ವಿವೇಕಾನಂದರ ಪಡಿಯಚ್ಚಿನಲ್ಲಿ ರೂಪಿಸಲ್ಪಟ್ಟವರು ಎಂದರೆ ಉತ್ಪ್ರೇಕ್ಷೆಯಾಗಲಾರದು.

ಕಾಲದ ಗತಿಯಲ್ಲಿ ಒಂದು ಶತಮಾನ ಬಹಳ ಕಿರಿದಾದ ಘಟಕ. ಒಂದು ಸಂಸ್ಥೆಯ ದೃಷ್ಟಿಯಿಂದಲೂ ಇದು ಬಹಳ ಕಿರಿದಾದ ಕಾಲಮಾನವೆಂದೇ ಹೇಳಬಹುದು. ರಾಮಕೃಷ್ಣ ಮಹಾಸಂಘವು ತನ್ನ ಈ ಎಳೆಯ ಪ್ರಾಯದಲ್ಲಿಯೇ ಅಂತಾರಾಷ್ಟ್ರೀಯ ವಲಯಗಳಲ್ಲಿಯೂ ಅಗಾಧವಾದ ಪ್ರಭಾವ ಬೀರಿದಂತಹ, 'ಎರಡನೆಯ ವಿವೇಕಾನಂದ'ರೆಂದೇ ಖ್ಯಾತರಾದ ಸ್ವಾಮಿ ರಂಗನಾಥಾನಂದರನ್ನು ಪೋಷಿಸಿ, ರೂಪಿಸಿದ್ದು ಅದ್ಭುತವೇ ಸರಿ.

ರಾಮಕೃಷ್ಣ ಮಹಾಸಂಘದಲ್ಲಿ ಅನೇಕ ಹಿರಿಯ ಆಧ್ಯಾತ್ಮಿಕ ಚೇತನಗಳೂ, ಅಗಾಧವಾದ ಪಾಂಡಿತ್ಯವುಳ್ಳ ಯತಿಗಳೂ ಆಗಿಹೋಗಿದ್ದಾರೆ. ದೇಶದ ವಿವಿಧ ಪ್ರಾಂತ್ಯಗಳಲ್ಲಿ ಅದಮ್ಯ ಉತ್ಸಾಹದಿಂದ ರಾಮಕೃಷ್ಣ-ವಿವೇಕಾನಂದರ ಭಾವಧಾರೆಯನ್ನು ಪ್ರಚಾರಮಾಡಿ ಹಲವಾರು ಕೇಂದ್ರಗಳ ಸ್ಥಾಪನೆಗೆ ಕಾರಣರಾದ ಕರ್ಮವೀರರು ಆಗಿಹೋಗಿದ್ದಾರೆ. ಸಾಧನೆಯಲ್ಲಿ ತಲ್ಲೀನರಾಗಿ ಉತ್ತಮ ಸಂನ್ಯಾಸ ಜೀವನವನ್ನು ಮೆರೆದ ಯತಿಶ್ರೇಷ್ಠರೂ ಇಲ್ಲದೇ ಇರಲಿಲ್ಲ. ಆದರೆ ಇವುಗಳೆಲ್ಲದರ ಜೊತೆಗೆ ಪ್ರತಿಯೊಂದು ಮಾತು, ಕ್ರಿಯೆಯಲ್ಲೂ ಮತ್ತೆ ಮತ್ತೆ ಬೇಸರವಿಲ್ಲದೆ ಮೂಡಿಬರುವ ಸೂರ್ಯನಂತೆ ಹೊರಹೊಮ್ಮುತ್ತಿತ್ತು ಸಾಮಾಜಿಕ ಕಳಕಳಿ ಹಾಗೂ ಮಾನವಾನುಕಂಪೆ ಸ್ವಾಮಿ ರಂಗನಾಥಾನಂದರಲ್ಲಿ. ಕೇರಳದ ಗ್ರಾಮೀಣ ಪರಿಸರದಲ್ಲಿ ಬೆಳೆದು ಬಂದ ಇವರಲ್ಲಿ ಇಂತಹ ಅದ್ಭುತ ಗುಣಗಳು ಹೇಗೆ ಮೇಳೈಸಿದ್ದವು ಎಂದು ವಿಸ್ಮಯವಾಗುತ್ತದೆ. ಇವರ ಸಾರ್ಥಕ ಜೀವನವನ್ನು ಕುರಿತು ಅನುಸಂಧಾನ ಮಾಡುವುದೇ ಒಂದು ವಿಶೇಷ ಅನುಭವ.

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಪ್ರಾರಂಭವಾಗಿದ್ದು ೧೯೨೫ರಲ್ಲಿ. ೧೯೨೬ರಲ್ಲಿ ಈ ಆಶ್ರಮವನ್ನು ಸೇರಿದ ಮೊದಲ ಬ್ರಹ್ಮಚಾರಿ ಸ್ವಾಮಿ ರಂಗನಾಥಾನಂದಜಿ. ಆಶ್ರಮದ ಬೆಳವಣಿಗೆಗೆ ಸಾಕ್ಷಿಯಾಗಿದ್ದು, ಎಲ್ಲ ಚಟುವಟಿಕೆಗಳಲ್ಲೂ ಆಸಕ್ತಿಯಿಂದ ಭಾಗವಹಿಸಿ ಪ್ರೋತ್ಸಾಹಿಸಿದವರು. ಮೈಸೂರಿನ ಬಗ್ಗೆ ಒಂದು ರೀತಿಯ ವ್ಯಾಮೋಹ ಎನ್ನುವಷ್ಟರ ಮಟ್ಟಿಗೆ ವಿಶೇಷ ಪ್ರೀತಿಯನ್ನಿಟ್ಟುಕೊಂಡು ಪದೇ ಪದೇ ತಮ್ಮ ಮೈಸೂರಿನ ದಿನಗಳನ್ನು ಮೆಲುಕುಹಾಕುತ್ತಿದ್ದರು. 'ನಾನು ಇವತ್ತು ಏನಾಗಿದ್ದೇನೆಯೋ ಅದಕ್ಕೆಲ್ಲ ಕಾರಣ ಮೈಸೂರು. ನಾನು ಅಲ್ಲಿ ಎಲ್ಲವನ್ನೂ ಪಡೆದೆ. ಮೈಸೂರು ನನ್ನ ಆಧ್ಯಾತ್ಮಿಕ ತವರೂರು,' ಎಂದು ಅವರು ಬಹಳಷ್ಟು ಬಾರಿ ಹೇಳುತ್ತಿದ್ದರು. ಇಂದು ನಿಮ್ಮ ಕೈಯಲ್ಲಿರುವ **ವಿವೇಕಪ್ರಭ** ಪತ್ರಿಕೆಯನ್ನು ಪ್ರಾರಂಭ ಮಾಡಬೇಕು ಎಂದು ಹಲವಾರು ದಶಕಗಳಿಂದ ತವಕಿಸುತ್ತಿದ್ದ ಪೂಜ್ಯರು ಪತ್ರಿಕೆಯ ಮೊದಲ ಸಂಚಿಕೆ ಬಿಡುಗಡೆಯಾದಾಗ ಅತ್ಯಂತ ಸಂತಸಪಟ್ಟವರಲ್ಲಿ ಮೊದಲಿಗರು. ಸಾಮಾಜಿಕ ಮತ್ತು ಆಡಳಿತ ವಲಯಗಳಲ್ಲೂ ಪ್ರಭಾವ ಬೀರಿದ ಈ ಮಹಾನ್ ವ್ಯಕ್ತಿಯ ಜೀವನ ಎಲ್ಲರಿಗೂ ಸ್ಫೂರ್ತಿ, ಪ್ರೇರಣೆ ನೀಡಿದೆ. ದಿಕ್ಸೂಚಿಯಂತೆ ಆದರ್ಶಗಳನ್ನು ಎತ್ತಿ ತೋರುವ ಜೀವನ ವಿದು. ಇದರಲ್ಲಿ ಸ್ವಾರ್ಥವಿರಲಿಲ್ಲ, ಆಡಂಬರವಿರಲಿಲ್ಲ., ಕೇವಲ ಪರಹಿತ ಹಾಗೂ 'ಅಮರ ಭಾರತ'ವನ್ನು ರೂಪಿಸುವ ಮಹೋದ್ದೇಶ ಇತ್ತು. ಒಳ್ಳೆಯ ಹೂವುಗಳಿಂದ ಮಕರಂದವನ್ನು ಶೇಖರಿಸಿ ಜೀವನವನ್ನೇ ಮಧುಮಯವನ್ನಾಗಿಸಿಕೊಳ್ಳುವ, ಮಧುವನ್ನೇ ಜಗತ್ತಿಗೆ ನೀಡುವ ಜೇನು ನೊಣದಂತೆ ಹಿರಿಯರು ಕಿರಿಯರು ಎನ್ನುವ ಭೇದವಿಲ್ಲದ ಉದಾರ ಗುಣಗಳನ್ನು ಕಂಡಾಗ ಮೆಚ್ಚುವ ವಿಶಾಲ ಹೃದಯ ಅವರದು. ಅವರಲ್ಲಿದ್ದ 'ಮಾನವಪ್ರೇಮ'ದ ಒಂದಂಶವಾದರೂ ನಮ್ಮಲ್ಲಿ ಜಾಗೃತವಾದರೆ ನಾವು ಉತ್ತಮ ವ್ಯಕ್ತಿಗಳಾಗುವುದರಲ್ಲಿ ಸಂದೇಹವೇ ಇಲ್ಲ.

### ಭಗವದ್ವ್ಯಾಕುಲತೆ

ಸಣ್ಣ ಪ್ರಾಯದಲ್ಲೇ ಶಂಕರನ್ (ಪೂಜ್ಯ ಸ್ವಾಮಿ ರಂಗನಾಥಾನಂದರ ಪೂರ್ವಾಶ್ರಮದ ಹೆಸರು) ಭಗವದ್ಭಕ್ತಿಯನ್ನು ಪಡೆದಿದ್ದರು. ಮನೆಯಲ್ಲಿದ್ದ ಧಾರ್ಮಿಕ ವಾತಾವರಣ, ವಿಶೇಷವಾಗಿ ತಾಯಿಯಲ್ಲಿದ್ದ ಭಕ್ತಿಶ್ರದ್ಧೆಗಳು ಮಗುವಿಗೂ ಸಹಜವಾಗಿಯೇ ಬಂದವು. ಶಾಲೆಯ ಬಾಲಕನಾಗಿದ್ದಾಗ ಅವರಿಗೆ ಶ್ರೀರಾಮಕೃಷ್ಣರ ವಚನವೇದ (ಆಂಗ್ಲಭಾಷೆಯಲ್ಲಿ) ಹಾಗೂ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ದೊರೆತಾಗ ಅವುಗಳಿಂದ ತೀವ್ರವಾಗಿ ಪ್ರಭಾವಿತರಾದ ಅವರ ಚಿಂತನೆಯಲ್ಲಿ ಒಂದು ಗಮನಾರ್ಹ ಬದಲಾವಣೆ ಕಂಡುಬಂತು. ಸ್ವಾಮಿ ವಿವೇಕಾನಂದರ ಭಾವನೆಗಳು ಅವರನ್ನು ಸಂಪೂರ್ಣವಾಗಿ ಆಕರ್ಷಿಸಿದವು. ಭಗವದ್ಭಕ್ತಿಯೇ ಮಾನವಪ್ರೇಮವಾಗಿ ಪರಿವರ್ತನೆಗೊಂಡು ಸಂನ್ಯಾಸ ಜೀವನವೇ ಜೀವನದ ಪರಮೋದ್ದೇಶವಾಯಿತು. ರಾಮಕೃಷ್ಣ ಮಹಾಸಂಘವನ್ನು ಸೇರಿ ಅಲ್ಲಿ ಅವರು ಪ್ರಾರಂಭದ ದಿನಗಳಲ್ಲಿ ಕಂಡುಕೊಂಡ ಆಧ್ಯಾತ್ಮಿಕ ನೆಲೆಯನ್ನು ಅವರದೇ ಮಾತುಗಳಲ್ಲಿ ಇದೇ ಸಂಚಿಕೆಯಲ್ಲಿ ನೀಡಿದ್ದೇವೆ. ಶ್ರೀರಾಮಕೃಷ್ಣರ ನೇರಶಿಷ್ಯರೂ ಸಂಘದ ಅಧ್ಯಕ್ಷರೂ ಆಗಿದ್ದ ಸ್ವಾಮಿ ಶಿವಾನಂದರಿಗೆ ಶಂಕರನ್ ಹಲವು ಪತ್ರಗಳನ್ನು ಬರೆದಿದ್ದರು. ಇವುಗಳಿಂದ ಇವರು ನಡೆಸುತ್ತಿದ್ದ ಸಾಧನೆಯ ತೀವ್ರತೆಯ ಪರಿಚಯ ನಮಗೆ ಗೊತ್ತಾಗುತ್ತದೆ. ಮನಸ್ಸನ್ನು ನಿಗ್ರಹಿಸಿ, ನಿರುತ್ಸಾಹ ಹಾಗೂ ದೈಹಿಕ ತೊಂದರೆಗಳನ್ನು ಕಡೆಗಣಿಸಿ ಅವರು ದೃಢಸಂಕಲ್ಪವನ್ನು ಬೆಳೆಸಿಕೊಂಡು ಆಧ್ಯಾತ್ಮಿಕ ಮಾರ್ಗದಲ್ಲಿ ತೀವ್ರವಾಗಿ ಸಾಗುತ್ತಿದ್ದರು. ವಿಧೇಯತೆ ಹಾಗೂ ಶ್ರದ್ಧೆಯಿಂದ ಆಶ್ರಮದ ಎಲ್ಲ ಕೆಲಸಗಳನ್ನೂ ಅಚ್ಚುಕಟ್ಟಾಗಿ ಮಾಡುವುದನ್ನು ಅಭ್ಯಾಸಮಾಡಿ ಆಶ್ರಮದ ಕೈಂಕರ್ಯದಲ್ಲಿ ಪಳಗಿದರು. ಕಡೆಯ ದಿನದವರೆಗೂ ಅವರು ಭಗವನ್ನಾಮಸ್ಮರಣೆಯನ್ನು ಚಾಚೂತಪ್ಪದೆ ಮಾಡುತ್ತಿದ್ದರು. ಶರೀರ ದುರ್ಬಲವಾದಾಗಲೂ ಜಪದ ಸರವನ್ನು ಹಿಡಿದು ಕುಳಿತುಕೊಂಡೇ ಧ್ಯಾನ ಮಾಡುತ್ತಿದ್ದರು. ಸೇವಕರು 'ತಾವು ಹೆಚ್ಚುಹೊತ್ತು ಕುಳಿತು ಜಪ ಮಾಡಬೇಕಿಲ್ಲ, ದಯವಿಟ್ಟು ಮಲಗಿ' ಎಂದು ಕೇಳಿ ಕೊಂಡರೂ ಕಿವಿಗೊಡದೆ 'ಇಲ್ಲ ನಾನು ಕುಳಿತುಕೊಳ್ಳುತ್ತೇನೆ' ಎಂದು ಹೇಳುತ್ತ ಸಾಧನೆಯಲ್ಲಿ ತಮ್ಮ ನಿಷ್ಠೆಯನ್ನು ತೋರಿಸಿಕೊಟ್ಟರು. ಈ ಸಂಘವೇ ಶ್ರೀರಾಮಕೃಷ್ಣರ ಶರೀರ ಹಾಗೂ ಸಂಘದ ಸೇವೆಯೇ ಸಾಧನೆ, ಆರಾಧನೆ ಎಂಬುದನ್ನು ದೃಢವಾಗಿ ನಂಬಿದ್ದರಲ್ಲದೆ ಇದರ ಬಗ್ಗೆ ಹೊಸಬರಿಗೆ ಒತ್ತಿ ಹೇಳುತ್ತಿದ್ದರು.

### ಶಾಸ್ತ್ರಜ್ಞಾನ

ಆರಂಭದ ದಿನಗಳಲ್ಲಿ ಆಶ್ರಮದ ಕೆಲಸಗಳನ್ನು ಬೇಗ ಅಚ್ಚುಕಟ್ಟಾಗಿ ಮಾಡಿ ಮುಗಿಸಿ ಹಿರಿಯ ಸಂನ್ಯಾಸಿಗಳಿಗೆ ಪಂಡಿತರು ಪಾಠ ಮಾಡುತ್ತಿದ್ದಾಗ ಇವರು ಕೆಲವೊಮ್ಮೆ ಹೊರಗೇ ನಿಂತು ಎಲ್ಲವನ್ನೂ ಕೇಳಿ ಕಲಿಯುತ್ತಿದ್ದರು. ಅವರು ಮಾಡುತ್ತಿದ್ದ ಕೆಲಸಗಳು ಹತ್ತುಹಲವು. ಆದರೂ ಸಂಸ್ಕೃತವನ್ನು ತಾವೇ ಸ್ವತಃ ಕಲಿತು ಪರಿಣತಿಯನ್ನು ಪಡೆದು ಉಪನಿಷತ್ತು, ಗೀತೆ, ಬ್ರಹ್ಮಸೂತ್ರಗಳ ಭಾಷ್ಯಗಳನ್ನು ಅಧ್ಯಯನ ಮಾಡಿದರು. ಗೀತೆ, ವಿವೇಕಚೂಡಾಮಣಿ, ಉಪನಿಷತ್ತುಗಳನ್ನು (ತಿಂಗಳಿಗೊಂದು ಅಧ್ಯಾಯವೆಂಬಂತೆ) ಕಂಠಪಾಠ ಮಾಡಲೇಬೇಕು ಎಂದು ಸಂಕಲ್ಪಿಸಿ ಸಫಲರಾದರು. ಒಂದೇ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಕೇವಲ ಐದೇ ನಿಮಿಷ ಸಮಯ ದೊರೆತರೂ ಪುಸ್ತಕ ಹಿಡಿದು ಓದುವುದರಲ್ಲಿ ತಲ್ಲೀನರಾಗಿಬಿಡುತ್ತಿದ್ದರು. ವ್ಯರ್ಥ ಕಾಲಹರಣವನ್ನು ಅವರು ಇಷ್ಟಪಡುತ್ತಿರಲಿಲ್ಲ. ತಮ್ಮ ಬಳಿ ಬಂದವರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರಾದರೂ ಅಸಂಬದ್ಧವಾದ ವಿಚಾರಗಳಿಗೆ ಅವಕಾಶವಿರುತ್ತಿರಲಿಲ್ಲ. ಪ್ರತಿಯೊಂದು ವಿಷಯದ ಬಗ್ಗೆಯೂ ಸ್ಪಷ್ಟವಾದ ಚಿಂತನಧಾರೆ ಅವರಿಗಿತ್ತು. ಭಗವದ್ಗೀತೆಯನ್ನು ಕಂಠಪಾಠ ಮಾಡಿದ ಪ್ರತಿಯೊಬ್ಬ ಬ್ರಹ್ಮಚಾರಿಗೂ ಅವರಿಂದ ಉಡುಗೊರೆಯಾಗಿ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ದೊರೆಯುತ್ತಿತ್ತು. ಹೀಗೆ ಪ್ರೋತ್ಸಾಹ ನೀಡುವ ಮೂಲಕ ನೂತನ ಸಂನ್ಯಾಸಿಗಳಿಗೆ ಮಾರ್ಗದರ್ಶಕರಾಗಿದ್ದರು.

ಸಾಮಾನ್ಯವಾಗಿ ಗಂಭೀರ ಆಲೋಚನೆಗಳಲ್ಲಿ ಮಗ್ನರಾದವರು ಜನವಿಮುಖರಾಗಿರುವುದನ್ನು ಕಾಣುತ್ತೇವೆ. ತಮ್ಮ ಅಮೂಲ್ಯ ಸಮಯ ವ್ಯರ್ಥವಾಯಿತೆಂದು ಬೇಸರಗೊಳ್ಳುವವರೂ ಇರುತ್ತಾರೆ. ಆದರೆ ಪೂಜ್ಯರು ಹಾಗೆಂದೂ ಇತರರ ಮನಸ್ಸನ್ನು ನೋಯಿಸಿದವರಲ್ಲ. ಯಾರೇ ಬಂದರೂ ಹಸನ್ಮುಖರಾಗಿ ಉದಾತ್ತ ವಿಚಾರಗಳನ್ನು ಹೇಳಿ ಅವರ ದುಃಖಸಂಶಯಗಳನ್ನು ದೂರಮಾಡಿ, ಸಾಂತ್ವನ ನೀಡಿ ಪ್ರಸಾದವನ್ನು ನೀಡುತ್ತಿದ್ದರು. ಯಾರೂ ಇಲ್ಲದಿದ್ದರೆ ತಕ್ಷಣ ಪುಸ್ತಕವನ್ನು ಹಿಡಿಯುತ್ತಿದ್ದರು.

ಅವರ ಜ್ಞಾನಾರ್ಜನೆಯಲ್ಲಿನ ಆಸಕ್ತಿಯನ್ನು ಕಂಡರೆ 'ಹೀಗೂ ಸಾಧ್ಯವೇ!' ಎಂಬ ಉದ್ಗಾರ ಹೊಮ್ಮುತ್ತದೆ. ಅತ್ಯಂತ ಆಧುನಿಕ ವಿಚಾರಗಳನ್ನು ಪ್ರತಿಪಾದಿಸುವ ಗ್ರಂಥಗಳನ್ನು ಆಮೂಲಾಗ್ರವಾಗಿ ಓದುವುದಷ್ಟೇ ಅಲ್ಲ ಪ್ರತಿಯೊಂದು ಹಾಳೆಯಲ್ಲೂ ಮುಖ್ಯಾಂಶಗಳನ್ನು ಗುರುತುಹಾಕಿ ಹಲವೆಡೆ ಟಿಪ್ಪಣಿಗಳನ್ನು ಬರೆದಿಡುತ್ತಿದ್ದರು. ಆಶ್ಚರ್ಯವೆಂದರೆ ಒಮ್ಮೆ ಓದಿದ ವಿಷಯ ಅಚ್ಚಳಿಯದೆ ಅವರ ಮನಸ್ಸಿನಲ್ಲಿ ಉಳಿದುಬಿಡುತ್ತಿದ್ದುದು. ಯಾವುದೇ ಪುಸ್ತಕ ಅಥವಾ ಹಾಳೆಯಲ್ಲಿ ಬರೆದಿಟ್ಟುಕೊಂಡಿರುವ ಟಿಪ್ಪಣಿ ವಿಚಾರಗಳನ್ನು ಆಶ್ರಯಿಸದೆ ನಿರರ್ಗಳವಾಗಿ ತಮ್ಮ ಸ್ಮೃತಿಶಕ್ತಿಯ ಸಹಾಯದಿಂದ, ನೇಯ್ಗೆಯ ಹಾಸುಹೊಕ್ಕುಗಳು ಬಟ್ಟೆಯಲ್ಲಿ

ಶಕ್ತಿಯ ಆಗರವಾದ ಉಪನಿಷತ್ತುಗಳನ್ನು ಕುರಿತು ಮತ್ತೆ ಮರುಚಿಂತನೆ ನಡೆಸಿದ್ದಾರೆ. ಪೂಜ್ಯ ಸ್ವಾಮಿ ರಂಗನಾಥಾನಂದರು ಆ ಮರುಚಿಂತನೆಯ ಫಲವೇ ಉಪನಿಷತ್ತುಗಳ ಸಂದೇಶ. ಈಶ, ಕೇನ, ಕಠ –ಈ ಮೂರು ಉಪನಿಷತ್ತುಗಳ ವಿಶ್ಲೇಷಣೆ ಮಾತ್ರ ನಡೆದಿರುವಂತೆ ಮೇಲುನೋಟಕ್ಕೆ ಕಂಡರೂ, ಇಲ್ಲಿ ಎಲ್ಲ ಉಪನಿಷತ್ತುಗಳ, ಅಷ್ಟೇಕೆ ಭಾಗವತ ಮತ್ತು ಭಗವದ್ಗೀತೆ ಮುಂತಾದ ಗ್ರಂಥಗಳ ಸಾರಸರ್ವಸ್ವವನ್ನೂ ರಂಗನಾಥಾನಂದರು ಓದುಗರ ಮುಂದೆ ಇರಿಸಿದ್ದಾರೆ. ಪ್ರಾಚೀನ ಮೇಧಾವಿ ಚಿಂತಕರ ಚಿಂತನೆಯ ಪ್ರಯೋಜನ ಸ್ವಾಮೀಜಿಗೆ ದೊರೆತಿದೆ. ಜೊತೆಗೆ ಈ ಯುಗದ ಮಹಾ ಮೇಧಾವಿಗಳೂ ಮಹರ್ಷಿಗಳೂ ಆದ ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಅನುಭಾವ, ಚಿಂತನೆಗಳ ಭಂಡಾರವು ಸ್ವಾಮಿಜಿಗೆ ಲಭ್ಯವಾಗಿದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳ ಇತಿಮಿತಿಗಳೆಲ್ಲವನ್ನೂ ಮೀರಿ ವಿಶ್ವವಿಶಾಲವಾದ ಆಧ್ಯಾತ್ಮಿಕ ನೆಲೆಯಲ್ಲಿ ನಿಂತ ರಾಮಕೃಷ್ಣ, ವಿವೇಕಾನಂದರ ದರ್ಶನಜನ್ಯ ಅನುಭೂತಿಯ ಬೆಳಕಿನಲ್ಲಿ ಉಪನಿಷತ್ತಿನ ಮಂತ್ರಗಳು ವ್ಯಾಖ್ಯಾನಗೊಂಡಿರುವುದರಿಂದ ಓದುಗರಿಗೆ ದೃಷ್ಟಿಶುದ್ಧಿಯೂ, ಹೃದಯ ವೈಶಾಲ್ಯವೂ ಮಹತ್ತಾದ ರೀತಿಯಲ್ಲಿ ದೊರಕುವುದರಲ್ಲಿ ಯಾವ ಸಂದೇಹವೂ ಇಲ್ಲ.

('ಉಪನಿಷತ್ತುಗಳ ಸಂದೇಶ' ಗ್ರಂಥದ ರಕ್ಷಾಕವಚದಿಂದ)

ಸುಂದರ ಚಿತ್ತಾರವನ್ನು ಮೂಡಿಸುವಂತೆ, ತಾವು ಹೇಳಬಯಸಿದ ವಿಷಯವನ್ನು ಅತ್ಯಂತ ಸ್ಪಷ್ಟವಾಗಿ ಮಂಡಿಸುತ್ತಿದ್ದರು. ಯಾವ ವಿಷಯವನ್ನೂ ಅಲ್ಪವೆಂದು ಪರಿಗಣಿಸದೆ ನಮ್ಮನ್ನು ಉತ್ತಮ ವ್ಯಕ್ತಿಗಳಾಗಿಸುವಲ್ಲಿ ಪ್ರತಿಯೊಂದಕ್ಕೂ ಸಾಮರ್ಥ್ಯವಿದೆ ಎಂದು ತೋರಿಸುತ್ತಿದ್ದರು. ಮದ್ರಾಸಿನ ಐ.ಐ.ಟಿ.ಯ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಲು ಪ್ರಾರಂಭಿಸಿದಾಗ ಯುವಕರು, 'Swamiji, can you speak on nothing ?' "ಸ್ವಾಮೀಜಿ ನೀವು 'ಇಲ್ಲದಿರುವಿಕೆ'ಯ ಕುರಿತು ಮಾತನಾಡಬಲ್ಲಿರಾ?" ಎಂದು ಕೇಳಿದಾಗ ಅವರು ಸುಮಾರು ಒಂದೂವರೆ ಗಂಟೆಯ ಕಾಲ ಅದೇ ವಿಷಯದ ಬಗ್ಗೆ ಮಾತನಾಡಿ ಅವರನ್ನೆಲ್ಲ ತಬ್ಬಿಬ್ಬಾಗಿಸಿದರು. ರಾಮಕೃಷ್ಣ ಮಹಾಸಂಘದ ಒಂಬತ್ತನೆಯ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಮಾಧವಾನಂದರು ಕರಾಚಿಯಲ್ಲಿ ಇವರ ಪ್ರವಚನವನ್ನು ಆಲಿಸಿ, 'ಶ್ರೀರಾಮಕೃಷ್ಣರು ಶಂಕರನ ನಾಲಿಗೆಯಲ್ಲಿ ನೆಲೆಸಿ ಲೀಲೆಯನ್ನು ತೋರಿಸುತ್ತಿದ್ದಾರೆ' ಎಂದು ಉದ್ಗರಿಸಿದರು. ಶ್ರೀರಾಮಕೃಷ್ಣರ ನೇರಶಿಷ್ಯರಾದ ಪೂಜ್ಯ ಅಖಂಡಾನಂದರ ಬಳಿ ಅವರು ಬೇಡಿದ್ದೂ ಇದನ್ನೇ. ಇದನ್ನೂ ಅವರದೇ ಮಾತುಗಳಲ್ಲಿ ಇದೇ ಸಂಚಿಕೆಯಲ್ಲಿ ಬೇರೆಡೆ ನೀಡಿದ್ದೇವೆ.

### ಮಾನವಕೇಂದ್ರಿತ ಧರ್ಮ

ಸ್ವಾಮಿ ವಿವೇಕಾನಂದರ ಕೃತಿಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಸಂಪೂರ್ಣವಾಗಿ ಅದೇ ಭಾವನೆಗಳನ್ನು ತಮ್ಮ ಪ್ರತಿಯೊಂದು ಉಪನ್ಯಾಸದಲ್ಲೂ ಆಧುನಿಕ ಸಂಶೋಧನೆಗಳ ಬೆಳಕಿನಲ್ಲಿ ಸೂಕ್ತ ಉದಾಹರಣೆಗಳೊಂದಿಗೆ ವಿವರಿಸುತ್ತಿದ್ದರು. ಪ್ರತಿಯೊಬ್ಬ ಮಾನವನಲ್ಲಿಯೂ ಇರುವ ದಿವ್ಯತೆ, ಪ್ರತಿಯೊಬ್ಬರಲ್ಲೂ ಇರುವ ಅನಂತ ಸಾಧ್ಯತೆ ಹಾಗೂ ಮಾನವಸೇವೆಯೇ ಮಾಧವಸೇವೆ ಮುಂತಾದ ಭಾವನೆಗಳು ಅವರ ಉಪನ್ಯಾಸಗಳ ಆಧಾರಶ್ರುತಿಯಾಗಿತ್ತು. ಮಾನವನಲ್ಲಿರುವ ದೈವತ್ವದ ಪರಿಚಯ ನೀಡುವ ಶಿಕ್ಷಣದಿಂದ ಜಾತೀಯತೆ, ಅಸ್ಪೃಶ್ಯತೆಗಳನ್ನು ಹೋಗಲಾಡಿಸಬಹುದು ಎಂದು ಅವರು ಪದೇ ಪದೇ ಹೇಳುತ್ತಿದ್ದರು. "ದೇವಸ್ಥಾನಗಳಿಂದ ಧರ್ಮವು ಹೊರಬಂದು ಸಮಾಜದಲ್ಲಿರುವ ಪ್ರತಿಯೊಬ್ಬನ ಏಳ್ಗೆಗೂ ಸಮಾನ ಅವಕಾಶಗಳನ್ನು ಕಲ್ಪಿಸಬೇಕು. ವಿಗ್ರಹಗಳ ಆರಾಧನೆಗಿಂತ ಜೀವಂತವಾಗಿರುವ, ಓಡಾಡುವ ಮಾನವರೂಪಿ ಭಗವಂತನ ಆರಾಧನೆಯೇ ಅತ್ಯುತ್ತಮ ಆರಾಧನೆ. ನಮ್ಮ ಶಾಸ್ತ್ರಗಳಲ್ಲಿರುವ ಉದಾತ್ತ ಭಾವನೆಗಳನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ನಮ್ಮ ದೇಶದ ಪ್ರಗತಿ ಸಾಧ್ಯ. ನಮ್ಮ ಸಂವಿಧಾನವು ಪ್ರತಿಯೊಬ್ಬನಿಗೂ ಸಮಾನವಾದ ಅವಕಾಶಗಳನ್ನು ನೀಡಿದೆಯಾದರೂ ವಿದ್ಯಾವಂತರೇ ವಂಚನೆ, ಭ್ರಷ್ಟಾಚಾರಗಳಿಂದ ತಮ್ಮ ದೇಶಬಾಂಧವರಿಗೆ ದ್ರೋಹವನ್ನು ಮಾಡುತ್ತಿದ್ದಾರೆ" ಎಂದು ಹೇಳುತ್ತ ನಮ್ಮ ರಾಷ್ಟ್ರೀಯ ಪ್ರಜ್ಞೆ ಹಾಗೂ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ:

"ವಿಶ್ವವ್ಯಾಪಕತೆ ಮತ್ತು ಮಾನವತೆ ಈ ಎರಡೂ ಭಾರತ ಸಂಸ್ಕೃತಿಯ ಪ್ರಮುಖ ಲಕ್ಷಣಗಳು. ಈ ಸಂಸ್ಕೃತಿಯು ಅಖಂಡ ಮಾನವನನ್ನು ಕುರಿತು ವಿವೇಚಿಸುತ್ತದೆಯೇ ಹೊರತು ಜಾತಿ, ಮತ, ಪಂಥ, ಜನಾಂಗ ಎಂದು ವಿಭಾಗಗೊಂಡಿರುವ ಮಾನವನನ್ನಲ್ಲ. ಮಾನವನು ಸಾಧಿಸಿದ ಅತ್ಯುನ್ನತ ಕೀರ್ತಿ ವೈಭವಗಳನ್ನೇ ಅದು ಅನ್ವೇಷಣೆ ಮಾಡಿದೆ. ಮನುಷ್ಯನು ಆಧ್ಯಾತ್ಮಿಕವಾದ ನಿಗೂಢ ಶಕ್ತಿಗಳನ್ನು ಶಿಕ್ಷಣದ ಮೂಲಕ ಹೆಚ್ಚುಹೆಚ್ಚಾಗಿ ಆವಿರ್ಭಾವ ಮಾಡಿಕೊಂಡುದರಿಂದ ಈ ಕೀರ್ತಿ ವೈಭವಗಳನ್ನು ಸಾಧಿಸಲು ಸಾಧ್ಯವಾಯಿತು. ಅಂತಹ ಶಿಕ್ಷಣ ದೊರೆಯ ಬೇಕಾದರೆ ಬಾಹ್ಯವಾಗಿ ಸಾಮಾಜಿಕ–ರಾಜಕೀಯವಾದ ನಿಯಮಪಾಲನೆ, ಆಂತರಿಕವಾಗಿ ಧರ್ಮದ ನಿಯಮಪಾಲನೆ ಅಗತ್ಯ. ಬಾಹ್ಯ ನಿಯಮಪಾಲನೆಯಿಂದ ಮಾನವನು ಪೌರತ್ವದ ಸಾಮಾಜಿಕ ಶ್ರೇಷ್ಠತೆಯನ್ನು ಪಡೆಯುತ್ತಾನೆ; ಇದರಲ್ಲಿ ಅವನು ಸಾಮಾಜಿಕ ಮೌಲ್ಯ ಮತ್ತು ಹಿತಗಳನ್ನು ಸೃಷ್ಟಿಸುವವನಾಗಿ ಸುಖಾನುಭವವನ್ನು ಪಡೆಯುತ್ತಾನೆ. (ಪರಿವರ್ತನ ಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು : ೧.೧೯)

ಸ್ವಾಮೀಜಿಯವರ ಉಪನ್ಯಾಸಗಳು ಹಳೆಯ ಶಾಸ್ತ್ರಗಳನ್ನೇ ಉದ್ಧರಿಸಿದ ಚರ್ವಿತಚರ್ವಣಗಳಲ್ಲ. ಮಾನವನ ಆಧುನಿಕ ಸಮಸ್ಯೆಗಳನ್ನು ಕುರಿತು ಆಳವಾಗಿ ಚಿಂತನೆ ನಡೆಸಿ ಸಾಮಾಜಿಕ ಸಂರಚನೆ, ಆಧುನೀಕರಣ, ಜಾಗತೀಕರಣ ಮುಂತಾದುವುಗಳೊಂದಿಗೆ ಹೇಗೆ ಹೊಂದಿಕೊಂಡು ಬದುಕ ಬೇಕು ಎಂಬುದನ್ನು ಅವರು ಪದೇ ಪದೇ ತಿಳಿಸುತ್ತಿದ್ದರು. ಹಾಸ್ಯದಿಂದೊಡಗೂಡಿದ ಉದಾಹರಣೆಗಳ ಮೂಲಕ ನಿಜ ಸ್ಥಿತಿಯನ್ನು ಕುರಿತು ಆಲೋಚನೆಗಳನ್ನು ಪ್ರಚೋದಿಸುತ್ತಿದ್ದರು:

"ಭೌತವಿಜ್ಞಾನವು ಮಾನವನಿಗೆ ತನ್ನ ತಂತ್ರಜ್ಞಾನದಿಂದ ಸೊಗಸಾದ ಮನೆಯನ್ನು ಕಟ್ಟಿಕೊಡಬಹುದು. ಅದರಲ್ಲಿ ರೇಡಿಯೋ, ಟೆಲಿವಿಷನ್ ಮುಂತಾದ ಸಾಧನಗಳನ್ನು ಅಳವಡಿಸಬಹುದು; ಆಧುನಿಕ ಕ್ಷೇಮಪಾಲಕ ಸರ್ಕಾರವು ಈ ಜಗತ್ತಿನಲ್ಲಿ ಸುಖಜೀವನವನ್ನು ನಡೆಸಲು ಬೇಕಾದ ಪ್ರತಿ ಯೊಂದನ್ನೂ ತನ್ನ ಸಾಮಾಜಿಕ ಭದ್ರತೆಯ ಯೋಜನೆಯನ್ವಯ ಅವನಿಗೆ ನೀಡಬಹುದು, ಅಷ್ಟೇ ಏಕೆ ಸರ್ಕಾರಪೋಷಿತ ಚರ್ಚು ಈ ಜಗತ್ತಿನಾಚೆಯ ಜಗತ್ತಿನ ಸುಖವನ್ನು ಒದಗಿಸುವ ಭರವಸೆಯನ್ನೂ ನೀಡಬಹುದು. ವ್ಯಕ್ತಿಯೇ ತನ್ನ ಮನೆಗೆ 'ಶಾಂತಿಕುಂಜ್' ಅಥವಾ 'ಸುಖ ನಿವಾಸ್' ಎಂಬ ಆಕರ್ಷಕವಾದ ಹೆಸರನ್ನು ಕೊಡಬಹುದು. ಆದರೆ ಇವಾವುವೂ ಅವನು ತನ್ನ ಮನೆಯಲ್ಲಿ ಶಾಂತಿಯಿಂದ ಅಥವಾ ಸುಖ ವಾಗಿ ಬದುಕುವ ಭರವಸೆಯನ್ನು ನೀಡಲಾರವು. ಏಕೆಂದರೆ ಹಾಗೆ ಬದುಕಬೇಕಾದರೆ ಅದಕ್ಕೆ ಬೇರೊಂದು ಮೂಲದಿಂದ ಬಹುಪಾಲು ಶಕ್ತಿ, ಪೋಷಣೆಗಳು ದೊರಕಬೇಕಾಗುತ್ತದೆ. ಬೇರೊಂದು ವಿಧವಾದ ಜ್ಞಾನ, ಶಿಸ್ತು ಬೇಕಾಗುತ್ತವೆ. ಆ ಜ್ಞಾನ ಶಿಸ್ತುಗಳ ಮೂಲ, ಧರ್ಮದ ವಿಜ್ಞಾನ ಮತ್ತು ತಂತ್ರ, ವ್ಯಕ್ತಿಯು ವಸ್ತುವಿಜ್ಞಾನದಿಂದ ನೆರವು ಪಡೆದು ಆರೋಗ್ಯಕರ ಹೊರಗಿನ ಪರಿಸರವನ್ನೂ, ಅಧ್ಯಾತ್ಮವಿಜ್ಞಾನದಿಂದ ಒಳಗಿನ ಪರಿಸರವನ್ನೂ ನಿರ್ಮಿಸಿಕೊಳ್ಳಬಲ್ಲನಾದರೆ ಆಗ ಮಾತ್ರ ಸಂಪೂರ್ಣ ಜೀವನಸಾಫಲ್ಯವನ್ನು ಪಡೆಯಬಲ್ಲನೇ ಹೊರತು, ಇಲ್ಲದಿದ್ದರೆ ಇಲ್ಲ. ಇದೇ ಉಪನಿಷತ್ತುಗಳ ವಿಧಾಯಕ ವಾಕ್ಯ." (ಅದೇ. ೧.೧೯೬)

ದೇಶದ ಹಿತಚಿಂತನೆ ಸದಾ ಅವರ ಮನಸ್ಸನ್ನು ಹಿಡಿ ದಿಟ್ಟಿತ್ತು. ಅವರ ಪ್ರವಚನಗಳಿಂದ ಪ್ರಭಾವಿತರಾದ ಪ್ರಮುಖರು, ಶಾಸಕರು ಅವರ ಬಳಿಗೆ ಬಂದಾಗ ರಾಜಕೀಯ ದಲ್ಲಿ ಮೌಲ್ಯಗಳನ್ನು ತರಬೇಕು, ಜನತೆಯ ಉದ್ಧಾರ ವಾಗಬೇಕು ಎಂದು ಮತ್ತೆ ಮತ್ತೆ ಅವರಿಗೆ ಹೇಳುತ್ತಿದ್ದರು. ನಮ್ಮ ರಾಷ್ಟ್ರದ ಎಲ್ಲ ಸಮಸ್ಯೆಗಳಿಗೂ ವಿವೇಕಾನಂದರ ನವ ವೇದಾಂತವೇ ಪರಿಹಾರ ಎಂದು ದೃಢವಾಗಿ ನಂಬಿದ್ದರು. 'ಇಂದಿನ ಸಮಸ್ಯೆಗಳೆಲ್ಲ ದೇಶವು ಎಚ್ಚೆತ್ತುಕೊಳ್ಳುತ್ತಿರುವುದರ ಸಂಕೇತ. ಈಗಿನ ಭ್ರಷ್ಟಾಚಾರ, ಮೌಲ್ಯಗಳಲ್ಲಿನ ಕುಸಿತವೆಲ್ಲ ನಿಶ್ಚಿತವಾಗಿ ಕೊನೆಗಾಣುವುವು. ನಮ್ಮ ದೇಶಕ್ಕೆ ಉಜ್ವಲ ಭವಿಷ್ಯವಿದೆ' ಎಂಬ ಪ್ರಚಂಡ ಆಶಾವಾದ ಅವರದು:

"ನಮ್ಮ ದೇಶವು ತನ್ನ ದೀರ್ಘಕಾಲದ ಇತಿಹಾಸದಲ್ಲಿ ಹಲವಾರು ಏರಿಳಿತಗಳನ್ನು ಅನುಭವಿಸಿದೆ. ಆದರೂ ಅದು ಸದಾ ಅಭಿವೃದ್ಧಿಯ ಪಥದಲ್ಲಿ ಮುನ್ನುಗ್ಗುತ್ತಿದೆ. ತಾತ್ಕಾಲಿಕ ಅಡಚಣೆಗಳನ್ನು, ಅದರಿಂದ ಬಂದ ಆಘಾತಗಳನ್ನು, ಮೀರಿ ನಿಲ್ಲಲು ನಮ್ಮಲ್ಲಿ ಮತ್ತು ನಮ್ಮ ಜೀವನಕ್ರಮದಲ್ಲಿ ನಮಗಿರುವ ಶ್ರದ್ಧೆ ನೆರವಾಗಿದೆ. ಕೆಲವು ರಾಷ್ಟ್ರ ಗಳು ಅನ್ಯಾಯದ ಉದ್ದೇಶಗಳನ್ನೂ ಸಂವಿಧಾನಗಳನ್ನೂ ಅನುಸರಿಸಲು ಪ್ರೇರೇಪಿಸುವುದರ ಜೊತೆಗೆ ಒತ್ತಾಯವನ್ನೂ ಬಳಸಿವೆ. ಆದರೆ ನಮ್ಮ ಉದ್ದೇಶ ನ್ಯಾಯಯುತವಾದುದು; ನಮ್ಮ ಸಂವಿಧಾನ ಸರಿಯಾದುದು. ಬೇರೆ ಯಾವ ದೇಶವನ್ನಾಗಲೀ ತೊಂದರೆಗೀಡುಮಾಡುವ ಬಯಕೆ ನಮಗಿಲ್ಲ. ನಾವು ಸ್ವಾತಂತ್ರ್ಯ ಗಳಿಸಿದಾಗಿನಿಂದಲೂ ಅನುಸರಿಸಿರುವ ಐತಿಹಾಸಿಕ ಸಂವಿಧಾನವೆಂದರೆ ಎಲ್ಲ ದೇಶಗಳ ಜನರ ಹಿತವನ್ನು ಬಯಸುವುದೇ ಆಗಿದೆ. **ಯತೋ ಧರ್ಮಸ್ತತೋ ಜಯಃ**—ಎಲ್ಲಿ ಧರ್ಮವೋ ಅಲ್ಲಿ ಜಯ—ಇದೇ ಮಹಾಭಾರತದ ಮೂಲಸೂತ್ರ. ನಮ್ಮ ಶ್ರದ್ಧೆಯನ್ನು ನಾವು ಬಲಗೊಳಿಸಿಕೊಳ್ಳಬೇಕು. ಸ್ವತಂತ್ರ ಭಾರತವು ಗೆಲುವಿನಿಂದ ಗೆಲುವಿಗೆ ಮುನ್ನಡೆಯುವಾಗ ಅಂಥ ಗೆಲುವಿನಿಂದ ಬೇರೆ ಯಾವ ದೇಶಕ್ಕೂ ಸೋಲಾಗದಿರುವಂತೆ ನಾವು ನಮ್ಮ ನಿರ್ಧಾರವನ್ನು ಉಜ್ವಲಗೊಳಿಸಿಕೊಳ್ಳಬೇಕು. ಈ ಸನ್ನಾಹ ದೀರ್ಘಕಾಲಿಕವಾಗಿರಬಹುದು; ಆಗಾಗ ಅಡಚಣೆಗಳನ್ನೂ ಎದುರಿಸಬೇಕಾಗಬಹುದು; ಅದರೆ ಕಡೆಯಲ್ಲಿ ರಾಷ್ಟ್ರವು ಆಧ್ಯಾತ್ಮಿಕವಾಗಿ ಪರಿಶುದ್ಧವಾಗಿ, ಭಾವನಾತ್ಮಕವಾಗಿ ಸಂಘಟಿತ ವಾಗಿ, ರಾಜಕೀಯವಾಗಿಯೂ ಸಾಮಾಜಿಕವಾಗಿಯೂ ಜಾಗ್ರತವಾಗಿ ಇರುವುದನ್ನು ಕಾಣುತ್ತೇವೆ." (ಅದೇ. ೪.೨೨೭)

ಕರಾಚಿಯಲ್ಲಿಯೇ ಆಗಲಿ, ಹೈದರಾಬಾದಿನಲ್ಲಿಯೇ ಆಗಲಿ, ಅಥವಾ ಭೇಟಿ ನೀಡುತ್ತಿದ್ದ ಯಾವುದೇ ಆಶ್ರಮ ವಾಗಲಿ, ಪೂಜ್ಯ ಸ್ವಾಮೀಜಿ ಅಲ್ಲಿನ ನೌಕರರ ಬಗ್ಗೆ ವಿಶೇಷ ಕಾಳಜಿ ವ್ಯಕ್ತಪಡಿಸುತ್ತಿದ್ದರು. ಹಾಗೆ ಗೌರವ ಪ್ರೀತಿಗಳಿಂದ ಮಾತನಾಡಿಸುತ್ತಿದ್ದುದರಿಂದ ಬೇರೊಂದು ಪ್ರದೇಶಕ್ಕೆ ವರ್ಗಾ ವಣೆಯಾದಾಗ ಭಕ್ತರೊಂದಿಗೆ ಕೆಲಸದವರೂ ಕಣ್ಣೀರು ಸುರಿಸುತ್ತಿದ್ದರು. ನೂರಾರು ಜನ ಭಕ್ತರು ಇವರಿಂದ ಆಧ್ಯಾತ್ಮಿಕ ದೀಕ್ಷೆ ಪಡೆದಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳ ಆಶ್ರಯದಲ್ಲಿ ಸಾಧನೆ ಮಾಡುವುದು ಸಾಧಕನ ಮಹಾಭಾಗ್ಯ. ಅವರ ಸಾನ್ನಿಧ್ಯವನ್ನು ನಮ್ಮ ಹೃನ್ಮನಗಳಲ್ಲಿ ತುಂಬಿಕೊಳ್ಳುತ್ತ ಅವರು ತೋರಿರುವ ದಿವ್ಯಮಾರ್ಗದಲ್ಲಿ ಶ್ರದ್ಧೆನಿಷ್ಠೆಗಳಿಂದ ಮುನ್ನಡೆಯೋಣ. ತನ್ನನ್ನೇ ಮೀರಿಸುವ ಶಿಷ್ಯನನ್ನು ಕಂಡಾಗ ಗುರುವಿಗೆ ಮಹದಾನಂದವಾಗುವಂತೆ ನಾವೂ ಅವರ ಕೃಪೆ ಯಿಂದ ಮುನ್ನಡೆಯೋಣ. ಅವರ ಕೃಪೆ, ಆಶೀರ್ವಾದ ಸದಾ ನಮ್ಮ ಮೇಲೆ ಇರುವುದರಲ್ಲಿ ಸಂದೇಹವಿಲ್ಲ.

ಇವರ ದಿವ್ಯಜೀವನದಿಂದ ಪ್ರೇರಿತರಾಗಿ ನಮ್ಮ ಆಧ್ಯಾತ್ಮಿಕ ಚೇತನವನ್ನು ಜಾಗೃತಗೊಳಿಸಿಕೊಂಡು ಉತ್ತಮ ಪ್ರಜೆಗಳಾಗಿ ಎಲ್ಲರಿಗೂ ಸಲ್ಲಬೇಕಾದ ಗೌರವ, ಮಾನ್ಯತೆಗಳನ್ನು ನೀಡಿ ಪರಿಪೂರ್ಣ ವ್ಯಕ್ತಿಗಳಾಗಲು ಪ್ರಯತ್ನಿಸೋಣ. ಇಂತಹ ಅಸಾಧಾರಣ ವ್ಯಕ್ತಿಗಳಿಗೆ ನಾವು ಸಲ್ಲಿಸಬೇಕಾದ ಶ್ರದ್ಧಾಂಜಲಿ ಇದೇ ಹೊರತು ಕೇವಲ ಹೂಮಾಲೆ ಅಥವಾ ಭಾಷಣ ಗಳಲ್ಲ. ಇವರ ಸಂದೇಶ ನಮ್ಮ ಜೀವನದ ದಾರಿದೀಪವಾಗಿ ಬತ್ತದ ಸೆಲೆಯಾಗಿ ಉಳಿಯಲಿ ಎಂದು ಆಶಿಸೋಣ.